## ಬಸ್ಯಾನ ಹೆಂಡ್ತಿ

ಬಸ್ಯಾ ವಿವಾಹವಾಗಿದ್ದ. ಗಂಡಹೆಂಡತಿ ತರಕಾರಿ ತರಲು ಮಾರುಕಟ್ಟೆಗೆ ಹೋಗಿದ್ದರು. ತರಕಾರಿ ಮಾರುವ ವೃದ್ಧೆ ಕೇಳಿದಳು, 'ಬಸ್ಯಾ ಮದುವೆ ಆಯಿತೆ?'

'ಹೂಂ ಅಜ್ಜಿ' ಎಂದ ಬಸ್ಯಾ.

'ಹುಡುಗಿ ಹೆಚ್ಚು ಕಲಿತಿದ್ದಾಳಾ?' ಎಂದಾಕೆ ಪುನಃ ಪ್ರಶ್ನಿಸಿದಳು.

'ಹೂಂ ಅಜ್ಜಿ, ಸಾಫ್ಟ್‌ವೇರ್ ಎಂಜಿನಿಯರ್ ಆಗಿದ್ದಾಳೆ' ಎಂದ.

ವೃದ್ಧೆ ಹೇಳಿದಳು,'ಚೀಲದಲ್ಲಿ ಮೊದಲು ಟೊಮೆಟೊ ಹಾಕಿ, ಅದರ ಮೇಲೆ ಕಲ್ಲಂಗಡಿ ಹಣ್ಣು ಹಾಕಿದಾಗಲೇ ಅಂದುಕೊಂಡೆ, ಆಕೆ ತುಂಬ ಕಲಿತಿದ್ದಾಳೆ ಎಂದು'.

**ಶೋಭಾ ಪ್ರಮೋದ್**





## ಟಿಪ್ಸ್

ನೀರಜ್ ಹೋಟೆಲ್‌ಗೆ ಹೋಗಿ ಊಟ ಮಾಡಿದ. ನಂತರ ಬಿಲ್ ತಂದ ವೇಟರ್‌ಗೆ ಹಣ ನೀಡಿ ಹೇಳಿದ, 'ಪ್ರತಿದಿನ ಬೆಳಿಗ್ಗೆ ಎದ್ದು ವ್ಯಾಯಾಮ ಮಾಡು, ಚೆನ್ನಾಗಿ ನೀರು ಕುಡಿ. ಸಿಗರೇಟ್ ಸೇದೋ ಅಭ್ಯಾಸ ಇದ್ದರೆ ಬಿಟ್ಟು ಬಿಡು'. ವೇಟರ್, 'ಸರ್, ಇದನ್ನೆಲ್ಲಾ ನನಗ್ಯಾಕೆ ಹೇಳ್ತಿದ್ದೀರಿ?' ಎಂದು ಕೇಳಿದ. ನೀರಜ್ ಹೇಳಿದ, 'ನನ್ನ ಗೆಳೆಯರು ಹೇಳಿದ್ದರು, ಹೋಟೆಲ್‌ನಲ್ಲಿ ಊಟ ಮಾಡಿದ ನಂತರ ವೇಟರ್‌ಗೆ 'ಟಿಪ್ಸ್' ಕೊಡಬೇಕು ಅಂತ!'

**ವಿ. ಹೇಮಂತಕುಮಾರ**

ಚಿತ್ರಗಳು: ಗಣೇಶ ಆಚಾರ್ಯ